# ಜಿಲ್ಲಾ ಪಂಚಾಯತ್, ರಾಯಚೂರು

ಸಂ:ಜಿಪರಾ/ಆಡಳಿತ/2928/2017-18

ದಿನಾಂಕ:23-06-2017

## ಟೆಂಡರ್ ಪ್ರಕಟಣೆ

ವಿಷಯ: 2017-18ನೇ ಸಾಲಿನಲ್ಲಿ ಒಂದು ವರ್ಷದ ಅವಧಿಗೆ ಅಲ್ಪ ಉಪಹಾರ, ಊಟ, ಪೂರೈಕೆಗೆ ದರಪಟ್ಟಿ ಸಲ್ಲಿಸುವ ಕುರಿತು.

-*-

ಜಿಲ್ಲಾ ಪಂಚಾಯತ್ ಕಛೇರಿ ವಿವಿಧ ಸಭೆಗಳಿಗೆ ಈ ಕೆಳಕಂಡಂತೆ, ಅಲ್ಪ ಉಪಹಾರ, ಊಟ, ಟೀ, ಪೂರೈಕೆಗಾಗಿ ಆಸಕ್ತ ಹೋಟೆಲ್/ಆಹಾರ ಸರಬರಾಜುದಾರರಿಂದ ಟೆಂಡರ್ ಪ್ರಕಟಣೆ ಮೂಲಕ, ದರಪಟ್ಟಿ ಆಹ್ವಾನಿಸಲಾಗಿದ್ದು, ಆಸಕ್ತರು **ದ್ವಿ ಲಕೋಟೆಯಲ್ಲಿ** ಟೆಂಡರ್ ಸಲ್ಲಿಸಬಹುದಾಗಿದೆ. ಒಪ್ಪಿದ ದರಗಳು ಆದೇಶ ನೀಡಿದ ದಿನದಿಂದ ಒಂದು ವರ್ಷದ ವರೆಗೆ ಚಾಲ್ತಿಯಲ್ಲಿರುತ್ತದೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಯಚೂರು ರವರು ದರಗಳ ಚಾಲ್ತಿ ಅವಧಿಯನ್ನು ನಿಗಧಿತ ದಿನಾಂಕ್ಕಿಂತ ಮುಂಚಿತವಾಗಿ ಮುಕ್ತಾಯಗೊಳಿಸುವ, ವಿಸ್ತರಿಸುವ ಅಥವಾ ರದ್ದುಪಡಿಸುವ ಅಧಿಕಾರ ಹೊಂದಿರುತ್ತಾರೆ.

| | | |
|---|---|---|
| 1 | ತಾಂತ್ರಿಕ ಮತ್ತು ಆರ್ಥಿಕ ಬಿಡ್ ಸಲ್ಲಿಸುವ ಕೊನೆಯ ದಿನಾಂಕ (ದ್ವಿಲಕೋಟೆಯಲ್ಲಿ) | 23-06-2017 ರಿಂದ 10-07-2017ರ ಮಧ್ಯಾಹ್ನ 1 ಘಂಟೆವರೆಗೆ |
| 2 | ತಾಂತ್ರಿಕ ಬಿಡ್ ತೆರೆಯುವ ದಿನಾಂಕ | 10-07-2017 ಸಂಜೆ 4.00 ಕ್ಕೆ ಜಿ.ಪಂ.ಕಛೇರಿಯಲ್ಲಿ |
| 3 | ಆರ್ಥಿಕ ಬಿಡ್ ತೆರೆಯುವ ದಿನಾಂಕ: | 13-07-2017 ಬೆಳಿಗ್ಗೆ 11.00 ಕ್ಕೆ ಜಿ.ಪಂ.ಕಛೇರಿಯಲ್ಲಿ |
| 4 | ಇ-ಮೇಲ್ ವಿಳಾಸ | ceo_zp_rch@nic.in |
| 5 | ಟೆಂಡರ್ ಪ್ರತಿ ಫಾರಂ ಬೆಲೆ ರೂ. | Rs.1000/- |

ಮಾಹಿತಿಯನ್ನು ಜಿಲ್ಲಾ ಪಂಚಾಯ್ತಿ ಕಛೇರಿಯ ಅಧಿಕೃತ website:http:// zpraihcur.kar.nic.in ನಿಂದಲೂ ಪಡೆಯಬಹುದಾಗಿದೆ. ಸದರಿ ಟೆಂಡರಿನ ಹೆಚ್ಚಿನ ವಿವರಗಳಿಗಾಗಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಹಾಗೂ ದೂರವಾಣಿ ಸಂಖ್ಯೆ:08532-227055 ರಲ್ಲಿ ಮಾಹಿತಿ ಪಡೆಯುವುದು.

23/6/17

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ರಾಯಚೂರು

ಪ್ರತಿಯನ್ನು

1) ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ರಾಯಚೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ ಈ ಪ್ರಕಟಣೆಯನ್ನು ಸ್ಥಳೀಯ ಎರಡು (ರಾಯಚೂರು ವಾಣಿ ಹಾಗೂ ಸುದ್ದಿಮೂಲ) ದಿನ ಪತ್ರಿಕೆಯಲ್ಲಿ ಪ್ರಕಟಣೆ ನೀಡಲು ಕೋರಿದೆ.
2) ವ್ಯವಸ್ಥಾಪಕ NIC ಕೇಂದ್ರ ರಾಯಚೂರು ರವರಿಗೆ ದಿನಾಂಕ:23-06-2017 ರಿಂದ 10-07-2017 ರ ವರೆಗೆ ಜಿಲ್ಲಾ ಪಂಚಾಯತ್ ಕಛೇರಿಯ ಅಧಿಕೃತ website http://zpraichur.kar.nic.in ನಲ್ಲಿ ಪ್ರಕಟಿಸಲು ತಿಳಿಸಿದೆ.
3) ಕಛೇರಿಯ ಸೂಚನಾ ಫಲಕಕ್ಕೆ
4) ಕಡತಕ್ಕೆ.

# ಜಿಲ್ಲಾ ಪಂಚಾಯತ್, ರಾಯಚೂರು

ಸಂ:ಜಿಪರಾ/ಆಡಳಿತ/2928/2017-18

ದಿನಾಂಕ:23-06-2017

ಟೆಂಡರದಾರರಿಗೆ ಇರಬೇಕಾದ ಅರ್ಹತೆಗಳು ಹಾಗೂ ಸಲ್ಲಿಸಬೇಕಾಗಿರುವ ದಾಖಲೆಗಳು

ಅನುಬಂಧ-1

1) ರಾಯಚೂರು ನಗರ ಸಭೆಯಿಂದ, ಹೋಟಲ್ ಉದ್ದಿಮೆ ಆಹಾರ ಪೂರೈಕೆ ನಡೆಸಲು ಪಡೆದ ಪರವಾನಿಗೆ
2) ರಾಯಚೂರು ನಗರ ಸಭೆಯಿಂದ ಲೇಬರ್ ಲೈಸನ್ಸ್
3) ರಾಯಚೂರು ನಗರ ಸಭೆಯಿಂದ, ಆಹಾರ ಸರಬರಾಜು ಮಾಡಲು Trade ಲೈಸನ್ಸ್
4) ಆದಾಯ ತೆರಿಗೆ ಇಲಾಖೆಯಲ್ಲಿ ನೊಂದಣಿ ಪ್ರಮಾಣ ಪತ್ರ ಹಾಗೂ PAN Number
5) ವಾಣಿಜ್ಯ ಇಲಾಖೆಯಲ್ಲಿ ನೊಂದಣಿ ಪ್ರಮಾಣ ಪತ್ರ ಹಾಗೂ Vat TIN Number
6) EMD ಮೊತ್ತ ರೂ.25,000/- ಗಳನ್ನು DD ನ್ನು Chief Executive Officer, Zilla Panchayath, Raichur ಇವರ ಹೆಸರಿನ ಮೇಲೆ ಪಡೆಯತಕ್ಕದ್ದು.
7) ಹೋಟಲ್/ಆಹಾರ ಪೂರೈಕೆದಾರರು ಸಂಸ್ಥೆಯು ಸರ್ಕಾರದ ಹಣ ದುರುಪಯೋಗ ಹಾಗೂ ಇನ್ನಿತರ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿರುವುದಿಲ್ಲ ಹಾಗೂ ಕಪ್ಪು ಪಟ್ಟಿಗೆ ಸೇರ್ಪಡೆ ಆಗಿಲ್ಲ ಎಂಬ ಬಗ್ಗೆ 100/- ಛಾಪಾ ಕಾಗದದ ಮೇಲೆ ನೋಟರಿಯಿಂದ ಧೃಡೀಕರಿಸಿದ ಘೋಷಣಾ ಪತ್ರ ಸಲ್ಲಿಸುವುದು.
8) ತಾಂತ್ರಿಕ ಬಿಡ್ ಮೊದಲು ತೆರೆಯಲಾಗುವುದು. ತಾಂತ್ರಿಕ ಬಿಡಿನಲ್ಲಿ ಅರ್ಹರಾದ ಟೆಂಡರದಾರರ ಹಣಕಾಸಿನ ಬಿಡ್ ಲಕೋಟೆಯನ್ನು ಮಾತ್ರ ತೆರೆಯಲಾಗುವುದು.
9) ಜಿಲ್ಲಾ ಪಂಚಾಯ್ತಿನಿಂದ ಆದೇಶ ಪಡೆದ ದಿನದಿಂದಲೇ ಸಭೆಗಳು ಜರುಗುವ ಸ್ಥಳಗಳಲ್ಲಿ ಆಹಾರವನ್ನು ಪೂರೈಸಲು ಸಿದ್ಧರಿರಬೇಕು. ಒಂದು ವೇಳೆ ಆದೇಶ ನೀಡಿದ ಆಹಾರವನ್ನು ಪೂರೈಸಲು ವಿಫಲರಾಗಿದಲ್ಲಿ ಟೆಂಡರ್ ರದ್ದುಪಡಿಸಲಾಗುವುದು. ಹಾಗೂ EMD ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
10) ಪೂರೈಸುವ ಆಹಾರಕ್ಕೆ ಜಿಲ್ಲಾ ಪಂಚಾಯ್ತಿನಲ್ಲಿ ಅನುದಾನ ಲಭ್ಯತೆ ಆಧರಿಸಿ, ನಿಯಮಾನುಸಾರ ಮೊತ್ತವನ್ನು ಪಾವತಿಸಲಾಗುವುದು.
11) ಒಂದು ವೇಳೆ ಸಭೆಗಳು ರದ್ದಾದಲ್ಲಿ/ಮುಂದೂಡಿದಲ್ಲಿ ಆಹಾರ ಸರಬರಾಜನ್ನು ರದ್ದುಪಡಿಸಲು ತಿಳಿಸಲಾಗುವುದು. ಈ ಸಂಧರ್ಭಗಳಲ್ಲಿ ಯಾವುದೇ ಪರಿಹಾರ ಮೊತ್ತ ಪಾವತಿಸಲಾಗುವುದಿಲ್ಲ.
12) ಟೆಂಡರದಾರರಿಂದ ಟೆಂಡರು ಅವಧಿಯಲ್ಲಿ ಪೂರೈಸುವ ಆಹಾರವು ಕಳಪೆ ಗುಣಮಟ್ಟದ ಅಥವಾ ಸಮರ್ಪಕವಾದ ಪ್ರಮಾಣ ಆಹಾರ ಸರಬರಾಜು ಮಾಡದ ಕಾರಣಗಳಿಂದ ಪೂರೈಸುವ ಆಹಾರವು ನಿರಾಕರಿಸುವ ಹಕ್ಕನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರಾಯಚೂರು ಹೊಂದಿರುತ್ತಾರೆ. ಯಾವುದೇ ಸೂಚನೆಗಳನ್ನು ನೀಡದೇ ಟೆಂಡರುಗಳನ್ನು ತಿರಸ್ಕರಿಸುವ/ರದ್ದುಪಡಿಸುವ ಹಕ್ಕನ್ನು ಮುಖ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ರವರು ಹೊಂದಿರುತ್ತಾರೆ.
13) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯ್ತ ರಾಯಚೂರು ರವರು ಒಪ್ಪಿದ ದರಗಳ ಅವಧಿಯನ್ನು ನಿಗಧಿತ ದಿನಾಂಕಕ್ಕಿಂತ ಮುಂಚಿತವಾಗಿ ಮುಕ್ತಾಯಗೊಳಿಸುವ, ವಿಸ್ತರಿಸುವ ಅಥವಾ ರದ್ದುಪಡಿಸುವ ಅಧಿಕಾರ ಹೊಂದಿರುತ್ತಾರೆ.
14) ಆಹಾರವನ್ನು ಸಭೆಗಳಲ್ಲಿ ಪೂರೈಕೆದಾರರೇ ವಿತರಿಸತಕ್ಕದ್ದು. ಆಹಾರ ವಿತರಣೆಗೆ ಬೇಕಾಗುವ ಸಿಬ್ಬಂದಿಗಳನ್ನು ನೇಮಿಸಿಕೊಳ್ಳತಕ್ಕದ್ದು. ಇದಕ್ಕೆ ಯಾವುದೇ ವೆಚ್ಚ ಕೊಡಲಾಗುವುದಿಲ್ಲ.
15) ಯಾವುದೇ ತಕರಾರು/ವ್ಯಾಜ್ಯಗಳು ರಾಯಚೂರು ನಗರದ ನ್ಯಾಯಾಲಯದ ವ್ಯಾಪ್ತಿಗೆ ಮಾತ್ರ ಒಳಪಟ್ಟಿರುತ್ತವೆ.
16) ದರ ನಮೂದಿಸುವಾಗ ನೀವು ನಮೂದಿಸುವ ದರವು ಎಲ್ಲಾ ತೆರಿಗೆಗಳನ್ನು ಸೇರಿ ದರ ನಮೂದಿಸತಕ್ಕದ್ದು.
17) ದ್ವಿಲಕೋಟೆ ಟೆಂಡರರಾಗಿರುವುದರಿಂದ ಆರ್ಥಿಕ ಬಿಡ್ (ಹಣಕಾಸಿನ ಲಕೋಟೆ) ಪ್ರತ್ಯೇಕವಾಗಿ ಹಾಕತಕ್ಕದ್ದು.

ಮೇಲ್ಕಂಡ 1 ರಿಂದ 5 ರ ವರೆಗಿನ ದಾಖಲೆಗಳ ಧೃಡೀಕೃತ ಪ್ರತಿಗಳನ್ನು ಹಾಗೂ 6 ರ ಮೂಲ ಪ್ರತಿಗಳನ್ನು ಟೆಂಡರ್ ಡಾಕ್ಯುಮೆಂಟಿನ ಲಕೋಟೆಯಲ್ಲಿ ಇಟ್ಟು ಸಲ್ಲಿಸತಕ್ಕದ್ದು. ಯಾವುದೇ ದಾಖಲೆಗಳು ಇಲ್ಲದ ಟೆಂಡರ್ ತಿರಸ್ಕೃತವಾಗುವುದು. ಈ ದಾಖಲೆಗಳ ಮೂಲ ಪ್ರತಿಯನ್ನು ಟೆಂಡರ್ ತೆರೆಯುವ ಸಂದರ್ಭದಲ್ಲಿ ಪರಿಶೀಲನೆಗೆ ಹಾಜರುಪಡಿಸತಕ್ಕದ್ದು. ಹಾಜರಪಡಿಸದಿದ್ದಲ್ಲಿ ಟೆಂಡರ್ ತಿರಸ್ಕೃತವಾಗುವುದು.

# ತಾಂತ್ರಿಕ ಬಿಡ್ ನಮೂನೆ-I

ಗೆ,

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ರಾಯಚೂರು

ಮಾನ್ಯರೆ,

ವಿಷಯ: 2017-18ನೇ ಸಾಲಿನಲ್ಲಿ ಒಂದು ವರ್ಷದ ಅವಧಿಗೆ ಅಲ್ಪ ಉಪಹಾರ, ಊಟ, ಪೂರೈಕೆಗೆ ದರಪಟ್ಟಿ ಸಲ್ಲಿಸುವ ಕುರಿತು.

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ ಜಿಪರಾ/ಆಡಳಿತ/2928/ 2017-18 ದಿನಾಂಕ:23-06-2017

-*-

| ಕ್ರ ಸಂ | ವಿವರ | ವಿವರಗಳು |
|---|---|---|
| 1 | ಸ್ಥಳೀಯ ಸಸ್ಯಹಾರಿ ಹೋಟಲ್/ಆಹಾರ ಪೂರೈಕೆದಾರರ ಹೆಸರು ಮತ್ತು ಸಂಪೂರ್ಣ ವಿಳಾಸ | |
| 2 | ಮೊಬೈಲ್ ನಂಬರ್ | |
| 3 | ಇ-ಮೇಲ್ ವಿಳಾಸ | |
| 4 | ರಾಯಚೂರು ನಗರ ಸಭೆಯಿಂದ, ಹೋಟಲ್ ಉದ್ದಿಮೆ ಆಹಾರ ಪೂರೈಕೆ ನಡೆಸಲು ಪಡೆದ ಪರವಾನಿಗೆ | |
| 5 | ರಾಯಚೂರು ನಗರ ಸಭೆಯಿಂದ ಲೇಬರ್ ಲೈಸನ್ಸ್ | |
| 6 | ರಾಯಚೂರು ನಗರ ಸಭೆಯಿಂದ, ಆಹಾರ ಸರಬರಾಜು ಮಾಡಲು Trade ಲೈಸನ್ಸ್ | |
| 7 | ಆದಾಯ ತೆರಿಗೆ ಇಲಾಖೆಯಲ್ಲಿ ನೊಂದಣಿ ಪ್ರಮಾಣ ಪತ್ರ ಹಾಗೂ PAN Number | |
| 8 | ವಾಣಿಜ್ಯ ಇಲಾಖೆಯಲ್ಲಿ ನೊಂದಣಿ ಪ್ರಮಾಣ ಪತ್ರ ಹಾಗೂ Vat TIN Number | |
| 9 | Tender ನಿಗಧಿಪಡಿಸಿರುವ EMD ಮೊತ್ತ ವಿವರ ರೂ.25,000/- | |
| 10 | ಸಂಸ್ಥೆಯು ಸರ್ಕಾರದ ಹಣ ದುರುಪಯೋಗ ಹಾಗೂ ಇತರೆ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿರುವುದಿಲ್ಲ ಹಾಗೂ ಕಪ್ಪು ಪಟ್ಟಿಗೆ ಸೇರಿರುವುದಿಲ್ಲ ಎಂಬ ಬಗ್ಗೆ 100/- ಛಾಪಾ ಕಾಗದದ ಮೇಲೆ ನೋಟರಿಯಿಂದ ಧೃಡೀಕರಿಸಿದ ಘೋಷಣಾ ಪತ್ರ. | |

1) ಟೆಂಡರಿನಲ್ಲಿ ನಮೂದಿಸಿದ ಎಲ್ಲ ಷರತ್ತುಗಳನ್ನು ಒಪ್ಪಿರುತ್ತೇನೆ. ಕರಾರಿನಂತೆ ಆಹಾರವನ್ನು ಪೂರೈಸಲು ವಿಫಲನಾದಲ್ಲಿ ನನ್ನ ಟೆಂಡರನ್ನು ಯಾವುದೇ ನೋಟೀಸ್ ನೀಡದೇ ರದ್ದುಗೊಳಿಸಬಹುದು. ಹಾಗೂ ಕಛೇರಿಗೆ ತೊಂದರೆಯಾಗಿದ್ದಕ್ಕೆ ಕ್ರಮ ಜರುಗಿಸಬಹುದು.
2) ಟೆಂಡರ್ ಷರತ್ತುಗಳನ್ನು ಪಾಲಿಸಲು ವಿಫಲನಾದಲ್ಲಿ ನನ್ನಿಂದ ಪಡೆದ EMD ಮೊತ್ತವನ್ನು ಜಿಲ್ಲಾ ಪಂಚಾಯ್ತ ನಿಧಿಗೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ.

ಮೇಲಿನ ಎಲ್ಲಾ ವಿವರಗಳನ್ನು ಹಾಗೂ ದಾಖಲೆಗಳ ಧೃಡೀಕೃತ ಪ್ರತಿಗಳನ್ನು ಸಲ್ಲಿಸಿದೆ. ಪರಿಶೀಲನಾ ಸಮಯದಲ್ಲಿ ಮೂಲ ಪ್ರತಿಗಳನ್ನು ಸಲ್ಲಿಸಲಾಗುವುದು.

ಸ್ಥಳ:

ದಿನಾಂಕ:

ಟೆಂಡರದಾರರ ಸಹಿ
ಹೆಸರು ಹಾಗೂ ವಿಳಾಸ

# ಆರ್ಥಿಕ ಬಿಡ ನಮೂನೆ-II (ದರಪಟ್ಟಿ)

ಗೆ,

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ರಾಯಚೂರು

ಮಾನ್ಯರೆ,

ವಿಷಯ: 2017-18ನೇ ಸಾಲಿನಲ್ಲಿ ಒಂದು ವರ್ಷದ ಅವಧಿಗೆ ಅಲ್ಪ ಉಪಹಾರ, ಊಟ, ಪೂರೈಕೆಗೆ ದರಪಟ್ಟಿ ಸಲ್ಲಿಸುವ ಕುರಿತು.

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ ಜಿಪರಾ/ಆಡಳಿತ/2928/ 2017-18 ದಿನಾಂಕ:23-06-2017

-*-

| ಕ್ರಸಂ | ಐಟಂ | ಪ್ರಮಾಣ | ನಮೂದಿಸಿದ ದರ (ಎಲ್ಲ ತೆರಿಗೆಗಳು ಸೇರಿ ರೂ.ಗಳಲ್ಲಿ) | |
|---|---|---|---|---|
| | | | ಅಂಕಿಗಳಲ್ಲಿ | ಅಕ್ಷರಗಳಲ್ಲಿ |
| 1 | ವಿಶೇಷ ಊಟ<br>ಒಂದು ನಮೂನೆ ಸಿಹಿ ಪದಾರ್ಥ, 4 ಪುರಿ Or 2 ಚಪಾತಿ, ರೊಟ್ಟಿ, ಎರಡು ನಮೂನೆ ಸಬ್ಜಿ, ದಾಲ್, ಹಪ್ಪಳ, ಸಾಂಬರು, ಸೋನಾ ಮಸೂರಿ ಅಕ್ಕಿಯ ಅನ್ನ, ಜೀರಾ ರೈಸ Or ವೆಜ್ ಬರಿಯಾನಿ, ಅರುಣ ಐಸಕ್ರಿಂ, ಕಲ್ಕತ್ತ ಪಾನ್, ಮೊಸರು, ಒಂದು ಲೋಟ ಮಜ್ಜಿಗೆ (ಈ ಊಟವನ್ನು ಒಳ್ಳೆಯ ಗುಣ ಮಟ್ಟದಲ್ಲಿ ಪೂರೈಸತಕ್ಕದ್ದು) | 1 ಊಟಕ್ಕೆ | | |
| 2 | ಸಾಮಾನ್ಯ ಊಟ<br>ಒಂದು ನಮೂನೆ ಸಿಹಿ ಪದಾರ್ಥ, 4 ಪುರಿ Or 2 ಚಪಾತಿ, ರೊಟ್ಟಿ, ಒಂದು ನಮೂನೆ ಸಬ್ಜಿ, ಕಾಳು, ಹಪ್ಪಳ ಸಾಂಬರು, ಸೋನಾ ಮಸೂರಿ ಅಕ್ಕಿಯ ಅನ್ನ, ಮೊಸರು, ಒಂದು ಲೋಟ ಮಜ್ಜಿಗೆ (ಈ ಊಟವನ್ನು ಒಳ್ಳೆಯ ಗುಣಮಟ್ಟದಲ್ಲಿ ಪೂರೈಸತಕ್ಕದ್ದು) | 1 ಊಟಕ್ಕೆ | | |
| 3 | ಇಡ್ಲಿ/ವಡ | 1 ಪ್ಲೇಟಿಗೆ | | |
| 4 | ಶೀರಾ | 1 ಪ್ಲೇಟಿಗೆ | | |
| 5 | ಉಪ್ಪಿಟ್ಟು | 1 ಪ್ಲೇಟಿಗೆ | | |
| 6 | ಬಿಸಿ ಬೆಳೆ ಬಾತ್/ಪುಳಿವಗರೆ | 1 ಪ್ಲೇಟಿಗೆ | | |
| 7 | ಮೊಸರನ್ನ | 1 ಪ್ಲೇಟಿಗೆ | | |
| 8 | ವೆಜ್ ಫಲಾವ್ | 1 ಪ್ಲೇಟಿಗೆ | | |
| 9 | ಕಾಫಿ/ಚಹ | 1ಕ್ಕೆ | | |
| 10 | ರವ ಇಡ್ಲಿ | 1ಪ್ಲೇಟಿಗೆ | | |

Tender ಪ್ರಕಟಣೆಯಲ್ಲಿನ ಎಲ್ಲ ಅರ್ಹತೆಗಳನ್ನು ಹೊಂದಿರುತ್ತೇನೆ. ಹಾಗೂ ಟೆಂಡರಿನ ಎಲ್ಲ ಷರತ್ತುಗಳನ್ನು/ನಿಬಂಧನೆಗಳನ್ನು ಒಪ್ಪಿ ದರಪಟ್ಟಿ ಸಲ್ಲಿಸಲಾಗಿದೆಯೆಂದು ಧೃಡೀಕರಿಸಿದೆ. ನಮೂದಿಸಿದ ದರ ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತವೆ.

ಸ್ಥಳ

ದಿನಾಂಕ:

ಟೆಂಡರದಾರರ ಸಹಿ,
ಹೆಸರು ಹಾಗೂ ವಿಳಾಸ ಮೊಬೈಲ್ ನಂಬರ,
ಹಾಗೂ ಇ-ಮೇಲ್ ವಿಳಾಸ